ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರು–1, ಬೆಂಗಳೂರು ವಿಭಾಗ, ಆಯುಕ್ತರ ಕಛೇರಿ,**

**ನೃಪತುಂಗ ರಸ್ತೆ, ಬೆಂಗಳೂರು–01**

ಸಂಖ್ಯೆ: ಅ1/ ಪ್ರೌಶಾಶಿವರ್ಗ 01/2019–20 ದಿನಾಂಕ: 18.10.2019

**ಜ್ಞಾಪನ**

ವಿಷಯ : 2018–19ನೇ ಸಾಲಿನ ಬೆಂಗಳೂರು ವಿಭಾಗ ಮಟ್ಟದ ಪ್ರೌಢ ಶಾಲಾ ಸಹ ಶಿಕ್ಷಕರ ವೃಂದದ ಕಡ್ಡಾಯ ವರ್ಗಾವಣೆಯಲ್ಲಿ "ಎ" ಪಟ್ಟಿಯಲ್ಲಿದ್ದು, ಬಿ ಮತ್ತು ಸಿ ವಲಯದಲ್ಲಿ ಹುದ್ದೆ ದೊರೆಯದಿರುವ ಪಿಸಿಎಂ ವಿಷಯದ ಶಿಕ್ಷಕರಿಗೆ ಮರು ಕೌನ್ಸಿಲಿಂಗ್ ಮಾಡುವ ಬಗ್ಗೆ.

ಉಲ್ಲೇಖ : ಮಾನ್ಯ ನಿರ್ದೇಶಕರು(ಪ್ರೌಢ ಶಿಕ್ಷಣ) ಸಾಶಿಇ, ಬೆಂಗಳೂರು ಇವರ ಜ್ಞಾಪನ ಸಂಖ್ಯೆ : ಸಿ4(7) ಪ್ರಾಶಿ.ವರ್ಗ 09/2019–20 ದಿನಾಂಕ:17.10.2019.

***

2018–19ನೇ ಸಾಲಿನ ಬೆಂಗಳೂರು ವಿಭಾಗದ ಪ್ರೌಢಶಾಲಾ ಶಿಕ್ಷಕರಿಗೆ 2018–19ನೇ ಸಾಲಿನ ಪ್ರೌಢಶಾಲಾ ವೃಂದದ ಕಡ್ಡಾಯ ವರ್ಗಾವಣೆಯಲ್ಲಿ "ಎ" ಪಟ್ಟಿಯಲ್ಲಿದ್ದು, "ಬಿ & ಸಿ" ವಲಯದಲ್ಲಿ ಹುದ್ದೆ ದೊರೆಯದ ಬೆಂಗಳೂರು ವಿಭಾಗದ 40 ಶಿಕ್ಷಕರಿಗೆ ದಿನಾಂಕ:–19.10.2019ರಂದು ನಿಯಮಾನುಸಾರ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸಲು ಉಲ್ಲೇಖಿತ ಪತ್ರದಲ್ಲಿ ತಿಳಿಸಲಾಗಿರುತ್ತದೆ.

ಅದರಂತೆ ಬೆಂಗಳೂರು ವಿಭಾಗದ ಪ್ರೌಢಶಾಲಾ ವೃಂದದ ಕಡ್ಡಾಯ ವರ್ಗಾವಣೆಯಲ್ಲಿ "ಎ" ಪಟ್ಟಿಯಲ್ಲಿದ್ದು, "ಬಿ & ಸಿ" ವಲಯದಲ್ಲಿ ಹುದ್ದೆ ದೊರೆಯದ 40 ಶಿಕ್ಷಕರ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಸದರಿ ಶಿಕ್ಷಕರಿಗೆ **ದಿನಾಂಕ: 19.10.2019ರಂದು "ಕೇಂದ್ರೀಕೃತ ದಾಖಲಾತಿ ಘಟಕ (ಸಿ.ಎ.ಸಿ), ಕೆಂಪೇಗೌಡ ರಸ್ತೆ, ಬೆಂಗಳೂರು"** ಇಲ್ಲಿ **ಅಪರಾಹ್ನ 04.00 ಗಂಟೆಗೆ** ಕೌನ್ಸಿಲಿಂಗ್ ನಡೆಸಲಾಗುತ್ತದೆ. ಸದರಿ ಕೌನ್ಸಿಲಿಂಗ್‌ಗೆ ಪಟ್ಟಿಯಲ್ಲಿನ ಶಿಕ್ಷಕರುಗಳು ಕಡ್ಡಾಯವಾಗಿ ಹಾಜರಿರಲು ಸೂಚಿಸಿದೆ. ಗೈರುಹಾಜರಾದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ಸದರಿ ಕೌನ್ಸಿಲಿಂಗ್‌ಗೆ ಉಪ ನಿರ್ದೇಶಕರ ಕಛೇರಿಯ ಒಬ್ಬ ಕಾರ್ಯನಿರ್ವಾಹಕರು ಕಡ್ಡಾಯವಾಗಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ತಿಳಿಸಿದೆ. ಹಾಗೂ ಕಡ್ಡಾಯ ವರ್ಗಾವಣೆಗಳ ಬಗ್ಗೆ ಕೌನ್ಸಿಲಿಂಗ್ ನಡೆಯುವ ಸ್ಥಳ ಮತ್ತು ದಿನಾಂಕಗಳನ್ನು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿರುವ ಶಿಕ್ಷಕರುಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಮಾಹಿತಿಯನ್ನು ತಲುಪುವಂತೆ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

18/10/2019

ಸಹ ನಿರ್ದೇಶಕರು,
ಬೆಂಗಳೂರು ವಿಭಾಗ.

ಗೆ.

ಬೆಂಗಳೂರು ವಿಭಾಗದ ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು(ಆಡಳಿತ)ರವರಿಗೆ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು:–

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ
2. ಮಾನ್ಯ ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ